NP – 003

VISHWA CHETHANA DEGREE COLLEGE
Anekal - 562106

# ಮೊದಲ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ಫೆಬ್ರವರಿ/ಮಾರ್ಚ್ 2024
## (NEP) (F+R)
## ಕನ್ನಡ ಭಾಷಾ ಪತ್ರಿಕೆ - 1
## ವಾಣಿಜ್ಯ ಕನ್ನಡ - 1

Time : 2½ Hours                                                      Max. Marks : 60

I. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (ಎಂಬತ್ತು ಪದಗಳಿಗೆ ಮೀರದಂತೆ)  (5×4=20)

1) ತಂತ್ರಜ್ಞಾನದ ಕಾಲದಲ್ಲಿ ಕನ್ನಡ ಬರವಣಿಗೆಯ ಸ್ವರೂಪ ಕುರಿತು ಬರೆಯಿರಿ.

2) ತಿರುವಳ್ಳುವರ್ ಪ್ರತಿಮೆ ವಿವಾದ ಕುರಿತು ಬರೆಯಿರಿ.

3) ಡಿಜಿಟಲ್ ಡಿವೈಡರ್ ಎಂದರೇನು ? ವಿವರಿಸಿ.

4) ಧಾರ್ಮಿಕ ಮನೋನಿಯಂತ್ರಣದ ಬಗ್ಗೆ ಪ್ಯಾಟ್ರಿಕ್‌ನ ಅಭಿಪ್ರಾಯವನ್ನು ಕುರಿತು ಬರೆಯಿರಿ.

5) ಆರ್ಥಿಕ ಸಾಕ್ಷರತೆ ಎಂದರೇನು ? ಸ್ತ್ರೀ ಶಕ್ತಿ ಯೋಜನೆಯನ್ನು ಪರಿಚಯಿಸಿ.

6) ನಿಯೋ ಲಿಬರಲ್‌ವಾದ ಕುರಿತು ಬರೆಯಿರಿ.

II. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (ನೂರಾ ಅರವತ್ತು ಪದಗಳಿಗೆ ಮೀರದಂತೆ)  (10×2=20)

1) ಭಾಷೆಗಳ ನಡುವಿನ ಬಾಂಧವ್ಯವನ್ನು 'ಕಾಣಿಕೆ' ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ.

2) ರಾಷ್ಟ್ರೀಯತೆ ಕುರಿತು ಟ್ಯಾಗೋರ್ ಮತ್ತು ಗಾಂಧೀಜಿ ಅವರ ಅಭಿಪ್ರಾಯಗಳನ್ನು ಚರ್ಚಿಸಿ.

3) ರೈತರೇ ಸ್ವತಃ ವಿತರಕರು, ಮಾರಾಟಗಾರರು ಆಗುವ ಸಾಧ್ಯತೆಯ ಸವಾಲುಗಳನ್ನು ಚರ್ಚಿಸಿ.

III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು ಸೂಕ್ತ ಶೀರ್ಷಿಕೆ ನೀಡಿ.  (3×1=3)

ಹೆಗ್ಡೆಯವರು ಕನ್ನಡ ಪ್ರಚಾರಕ್ಕೆ ನಿಂತವರೇನೂ ಅಲ್ಲ. ಅವರು ಕನ್ನಡದ ಪ್ರಾಧ್ಯಾಪಕರೋ ಪಂಡಿತರೋ ಅಲ್ಲವೂ ಅಲ್ಲ. ಅವರ ಮನೆ ಮಾತು ತುಳು ಎಂದುಕೊಂಡಿದ್ದೇನೆ. ಆದರೂ ಅಂಥ ಸೊಗಸಿನ ಕನ್ನಡವನ್ನು ಅವರು ಹೇಗೆ ಸಾಧಿಸಿದರು ? ಬಹುಶಃ ನಾನು ಅವರ ಸಂದರ್ಶಕನಾಗಿರುತ್ತಿದ್ದರೆ, ಸಂದರ್ಶನದ ಕೊನೆಯಲ್ಲಿ ಈ ಮಾತನ್ನು ಕೇಳಿಯೇ ಬಿಡುತ್ತಿದ್ದೆ. ಇಡೀ ಸಂದರ್ಶನದಲ್ಲಿ ಹೆಗ್ಡೆಯವರು ಮಾತನಾಡುತ್ತಿದ್ದ ವಿಷಯ ಧರ್ಮಸ್ಥಳದ ಮಹಿಮೆ. ನ್ಯಾಯದಾನ, ಆಡಳಿತ, ಗ್ರಾಮಾಭಿವೃದ್ಧಿ, ಯುವಜನ ಶಿಕ್ಷಣ, ಶ್ರೀ ಗೊಮ್ಮಟ

P.T.O.

ಮಸ್ತಕಾಭಿಷೇಕ ಮುಂತಾದವುಗಳ ಬಗ್ಗೆ. ವಿನಯ, ಸಜ್ಜನಿಕೆ, ಸಂಸ್ಕೃತಿ, ಜನಪರ ಕಾಳಜಿ ಅವರ ಮಾತುಗಳಲ್ಲಿ ತುಂಬಿದ್ದುವು. ತಾನು ಮಾಡುತ್ತಿರುವ ಕೆಲಸದಲ್ಲಿ ಪೂರ್ತಿಯಾಗಿ ನಂಬಿಕೆ ಮತ್ತು ಆಸಕ್ತಿ ಇರುವ ಹಾಗೂ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ವ್ಯಕ್ತಿಯೊಬ್ಬನ ಕನ್ನಡ ಇದು. ಕೇಳುಗರ ಮುಂದೆ ತನ್ನ ದೊಡ್ಡತನವನ್ನು ತೋರಿಸಬೇಕೆಂಬ ಇರಾದೆಯಾಗಲಿ, ಸ್ವಯಂ ಪ್ರತಿಷ್ಠೆಯ ಪ್ರದರ್ಶನವಾಗಲಿ, ಕಪೋಲ ಕಲ್ಪಿತ ಎದುರಾಳಿಯ ಮೇಲೆ ಪ್ರತಿದಾಳಿಯಾಗಲಿ ಅವರ ಮಾತುಗಳಲ್ಲಾಗಲಿ ನಿಲುವಿನಲ್ಲಾಗಲಿ ಕಾಣಿಸಲೇ ಇಲ್ಲ. ನುಡಿ ಮತ್ತು ನಡೆಯ ನಡುವಣ ಸಂಬಂಧ ಸರಿಯಾದಷ್ಟು ಮಾತು ಸಹಜವಾಗುತ್ತ ಹೋಗುತ್ತದೆ. ಅಬ್ಬರದ ಶೈಲಿಯಲ್ಲಿ ಮಾತಾಡುವ ರಾಜಕಾರಣಿಗಳ ಕುರಿತು ನಾನಿಲ್ಲಿ ಹೇಳುತ್ತಿಲ್ಲ. ನ್ಯಾಯಾಲಯದಲ್ಲಿ ವಾದಿಸುವ ವಕೀಲರ ಕುರಿತು ಅಲ್ಲ. ತರಗತಿಗಳಲ್ಲಿ ಪಾಠ ಹೇಳುವ ಅಧ್ಯಾಪಕರ ಕುರಿತು ಅಲ್ಲ.

IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ. **(1×2=2)**

V. ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. **(1×2=2)**

1) ದೇಣಿಗೆ

2) ಹುಡುಕಾಟ

3) ಹೊಸತನ

4) ಪ್ರತಿಷ್ಠೆ

VI. ಕಾಲೇಜಿನ ಶುಲ್ಕದಲ್ಲಿ ವಿನಾಯಿತಿ ಕೋರಿ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ. **(4×1=4)**

VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. **(1×4=4)**

1) ಬಾಹುಳ್ಯ

2) ಕಳೆ

3) ಮನೋಜ್ಞ

4) ಹುರುಳು

5) ದೀವಟಿಗೆ

6) ಸರಕು

7) ರೀಟೇಲ್

8) ಬೈಲಾ

VIII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. ಎಲ್ಲಾ ಐದು ಪ್ರಶ್ನೆಗಳಿಗೆ ಉತ್ತರಿಸಿ. (1×5=5)

1) ಭಾಷೆ ಎಂದರೆ ರಷ್ಯನ್ ಭಾಷೆಯಲ್ಲಿ

1) ಪುಸ್ತಕ 2) ಜನ

3) ಸಮಾಜ 4) ನಂಬಿಕೆ

2) ಟ್ಯಾಗೋರ್ ಸ್ಥಾಪಿಸಿದ ವಿದ್ಯಾಸಂಸ್ಥೆ

1) ಶಾಂತಿನಿಕೇತನ 2) ಅನಿಕೇತನ

3) ಚೇತನ 4) ಕಲಾನಿಕೇತನ

3) ಭಾರತೀಯ ರೈತರಿಗೆ ತಿಳಿದಿದ್ದ ಭತ್ತದ ತಳಿಗಳು

1) ಹತ್ತು ಸಾವಿರ 2) ಲಕ್ಷ

3) ಸಾವಿರ 4) ಐದು ಸಾವಿರ

4) 'ಅನ್ಯಭಾಷಾ ವ್ಯಾಮೋಹ' ಲೇಖನದ ಕರ್ತೃ

1) ತೇಜಸ್ವಿ 2) ಸುಜನಾ

3) ಬಾಲಕೃಷ್ಣ 4) ನಾರಾಯಣ

5) ಸ್ತ್ರೀ ಶಕ್ತಿ ಗುಂಪಿಗೆ ಸೇರಲು ನಿಗದಿತ ವಯಸ್ಸು

1) 20 2) 18

3) 22 4) 19